‘ಒಟಿಟಿ ವೇದಿಕೆಗಳ ಮೂಲಕ ಕಡಿಮೆ ಖರ್ಚಿನಲ್ಲಿ ಕೂಡ ಉತ್ತಮ ಕಾರ್ಯಕ್ರಮ ರೂಪಿಸಬಹುದು. ಕನ್ನಡದ ಸಾಹಿತ್ಯಕ್ಕಾಗಿಯೇ ಒಂದು ಕಾರ್ಯಕ್ರಮ ಅಲ್ಲಿ ಶುರುವಾಗಬಹುದು. ಕನ್ನಡದ ಪ್ರಾದೇಶಿಕ ಭಾಷೆಗಳಲ್ಲಿ ಒಳ್ಳೆಯ ಕಾರ್ಯಕ್ರಮ ಸಿದ್ಧಗೊಂಡು, ಅದು ಹೊಸ ವೇದಿಕೆಗಳ ಮೂಲಕ ಜನರನ್ನು ತಲುಪಬಹುದು. ಇಂಥವನ್ನೆಲ್ಲ ಈಗಿನ ಟಿ.ವಿ. ವ್ಯವಸ್ಥೆ ಮೂಲಕ ಆಗುತ್ತದೆ ಎಂದು ನಿರೀಕ್ಷಿಸುವಂತಿಲ್ಲ. ಜಿಯೊ ಫೈಬರ್‌ಗೆ ಏರ್‌ಟೆಲ್ ಬ್ರಾಡ್‌ಬ್ಯಾಂಡ್ ಕೂಡ ಒಟಿಟಿ ವೇದಿಕೆಗಳನ್ನು ತನ್ನ ಗ್ರಾಹಕರಿಗೆ ತಲುಪಿಸುವ ಕೆಲಸ ಶುರು ಮಾಡಿದೆ. ಇದರಿಂದಲೂ ಪ್ರಾದೇಶಿಕ ಭಾಷೆಗಳಿಗೆ ಲಾಭವಿದೆ’




ಕಾರ್ಟೂನ್‌ಗಳು – ಇವೆಲ್ಲವನ್ನೂ ಕೊಡುತ್ತಿರುವ ಜಿಯೊ ಮೊಬೈಲ್ ದೂರಸಂಪರ್ಕ ಕಂಪನಿಯ ಹೊಸ ಘೋಷಣೆಯನ್ನು ಲಘುವಾಗಿಯಂತೂ ಪರಿಗಣಿಸಲು ಸಾಧ್ಯವಿಲ್ಲ.

### ಭಿನ್ನ ದನಿಗಳು

ಸಿನಿಮಾ ವೀಕ್ಷಿಸುವ ಹೊಸ ಬಗೆಯ ಬಗ್ಗೆ ಕನ್ನಡ ಸಿನಿಮಾ ಉದ್ಯಮದಲ್ಲಿ ಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿವೆ. ‘ಮೊದಲ ದಿನದ ಮೊದಲ ಶೋ ವ್ಯವಸ್ಥೆ ಜಾರಿಗೆ ಬಂದ ನಂತರ ಸಿನಿಮಾ ವೀಕ್ಷಣೆಯಲ್ಲಿ ದೊಡ್ಡ ಬದಲಾವಣೆ ಏನೂ ಆಗುವುದಿಲ್ಲ’ ಎನ್ನುತ್ತಾರೆ ಕನ್ನಡದ ಹೆಸರಾಂತ ನಟ ಮತ್ತು ನಿರ್ದೇಶಕರೊಬ್ಬರು.

‘ಹೊಸ ಚಿತ್ರವನ್ನು ಮನೆಯಲ್ಲೇ ಕುಳಿತು ನೋಡುವುದು ತೀರಾ ಹೊಸ ವ್ಯವಸ್ಥೆಯೇನೂ ಅಲ್ಲ. ಇಂಥದ್ದನ್ನು ಈ ಹಿಂದೆಯೂ ಕೆಲವರು ಪ್ರಯತ್ನಿಸಿದ್ದರು. ಆದರೆ, ಜನರಿಂದ ಅಷ್ಟೇನೂ ಒಳ್ಳೆಯ ಪ್ರತಿಕ್ರಿಯೆ ಸಿಗಲಿಲ್ಲ. ಅಂತರ್ಜಾಲದ ಮೂಲಕ ಮನರಂಜನಾ ಹೂರಣ ಒದಗಿಸುವ ಅಮೆಜಾನ್ ಪ್ರೈಮ್ ಮತ್ತು ನೆಟ್‌ಫ್ಲಿಕ್ಸ್‌ಗಳು ಭಾರತದಲ್ಲಿ ಗಟ್ಟಿಯಾಗಿ ಬೇರುಬಿಟ್ಟ ನಂತರದಲ್ಲೂ, ಸಿನಿಮಾ ವೀಕ್ಷಣೆ ವಿಚಾರದಲ್ಲಿ ಬಹಳ ದೊಡ್ಡ ಬದಲಾವಣೆಯೇನೂ ಆಗಿಲ್ಲ’ ಎಂದವರು ಹೇಳಿದರು.

‘ಜಿಯೊ ಹೇಳಿರುವ ಸೌಲಭ್ಯವು ಸಿನಿಮಾ ಮಾರುಕಟ್ಟೆಯ ಒಳಿತಿನ ದೃಷ್ಟಿಯಿಂದ ಒಳ್ಳೆಯದಲ್ಲ’ ಎನ್ನುತ್ತಾರೆ ನಿರ್ದೇಶಕ ಮಂಸೋರೆ. ತಮ್ಮ ವಾದಕ್ಕೆ ಪೂರಕವಾಗಿ ಅವರು ಕೆಲವು ವಿವರಗಳನ್ನು ನೀಡುತ್ತಾರೆ. ‘ಸಿನಿಮಾ ಮಂದಿರಗಳ ಮೂಲಕ ಚಿತ್ರ ಪ್ರದರ್ಶನ ಮಾಡುವುದು, ಆ ಮೂಲಕ ಹಣ ಬರುವುದು ಎಂಬ ವ್ಯವಸ್ಥೆಯೇ ಈಗಿನ ಸಂದರ್ಭದಲ್ಲಿ ನಿರ್ಮಾಪಕರನ್ನು ಬದುಕಿಸುತ್ತಿದೆ. ಹೊಸ ಸಿನಿಮಾಗಳನ್ನು ಟಿ.ವಿ. ಮೂಲಕ ಪ್ರಸಾರ ಮಾಡಿ, ಮನೆಯಲ್ಲೇ ಅದನ್ನು ನೋಡುವ ವ್ಯವಸ್ಥೆ ಕಲ್ಪಿಸಿದರೆ ಜನ ಸಿನಿಮಾ ನೋಡುವ ಬದಲು ಅದನ್ನು ರೆಕಾರ್ಡ್ ಮಾಡಿ, ನಕಲು ಮಾಡಲು ಆರಂಭಿಸುತ್ತಾರೆ. ಇದು ಸಿನಿಮಾ ನಕಲು (ಪೈರೆಸಿ) ಹಾವಳಿಯನ್ನು ಇನ್ನಷ್ಟು ಹೆಚ್ಚಿಸುತ್ತದೆ’ ಎಂಬ ಆತಂಕ ಮಂಸೋರೆ ಅವರದು.

ನೆಟ್‌ಫ್ಲಿಕ್ಸ್ ಅಥವಾ ಇತರ ಯಾವುದೇ ಒಟಿಟಿ (ವೆಬ್ ಮೂಲಕ ಮನರಂಜನಾ ಕಾರ್ಯಕ್ರಮ ಪ್ರಸಾರ ಮಾಡುವ ವೇದಿಕೆ) ವ್ಯವಸ್ಥೆಯ ಮೂಲಕ ಪ್ರಸಾರ ಆಗುವ ಸಿನಿಮಾಗಳನ್ನು, ವೆಬ್ ಸರಣಿಗಳನ್ನು ಅವು ಪ್ರಸಾರವಾದ ಕೆಲವೇ ಗಂಟೆಗಳಲ್ಲಿ ಅಂತರ್ಜಾಲದ ಮೂಲಕ ಉಚಿತವಾಗಿ ಹಂಚುವ ಪ್ರವೃತ್ತಿ ಶುರುವಾಗಿದೆ. ಹೀಗಿರುವಾಗ ಹೊಸ ಸೌಲಭ್ಯವು ಸಿನಿಮಾ ನಿರ್ಮಾಪಕರನ್ನು ಇನ್ನಷ್ಟು ಕಷ್ಟಕ್ಕೆ ತಳ್ಳಬಹುದು ಎಂದು ಮಂಸೋರೆ ಕಳವಳ ವ್ಯಕ್ತಪಡಿಸುತ್ತಾರೆ.

‘ಸಿನಿಮಾಗಳನ್ನು ಚಿತ್ರಮಂದಿರದಲ್ಲಿ ನೋಡಿದರೆ ಮಾತ್ರವೇ ಚೆನ್ನ ಎನ್ನುವ ಸಂಸ್ಕೃತಿ ಕೆಲವು



ಮಂಸೋರೆ

## ಸಿನಿ ಪ್ರೇಮಿಗಳ ಖುಷಿ

ಬೆಂಗಳೂರಿನ ಮಲ್ಟಿಪ್ಲೆಕ್ಸ್ ಒಂದರಲ್ಲಿ ಅಂದಾಜು 750 ಎಂ.ಎಲ್. ಇರುವ ಸೆವೆನ್ ಅಪ್ ಬೆಲೆ ಎರಡು ವಾರಗಳ ಹಿಂದೆ ₹ 230 ಆಗಿತ್ತು. ಇದನ್ನು ಮುಕ್ತ ಮಾರುಕಟ್ಟೆಯಲ್ಲಿ ಸರಿಸುಮಾರು ₹ 100ಕ್ಕೆ ಪಡೆಯಬಹುದು. ಪಾಪ್‌ಕಾರ್ನ್ ಬೆಲೆಯೂ ಮಲ್ಟಿಪ್ಲೆಕ್ಸ್‌ಗಳಲ್ಲಿ ತೀರಾ ದುಬಾರಿ. ಹೊಸ ಸಿನಿಮಾಗಳನ್ನು ಮನೆಯಿಂದಲೇ ನೋಡುವ ಸೌಲಭ್ಯ ಸಿಕ್ಕರೆ, ಮಲ್ಟಿಪ್ಲೆಕ್ಸ್‌ಗಳ ಈ ದುಬಾರಿ ವ್ಯವಹಾರಗಳಿಗೆ ಕಡಿವಾಣ ಬೀಳುತ್ತದೆ ಎಂದು ಕೆಲವು ಸಿನಿಮಾ ಪ್ರೇಮಿಗಳು ಖುಷಿಯಿಂದ ಟ್ವೀಟ್ ಮಾಡಿದ್ದಾರೆ.